ಮಾಡಿದ್ದೇವೆ. ಒಟ್ಟಾರೆ ಎಲ್ಲಾ ಕೆಲಸವನ್ನು ಮೊದಲು ಬೇರೆಬೇರೆಯವರಿಗೆ ಕೊಡುತ್ತಿದ್ದರು. ಪೈಪ್‌ಲೈನೇ ಒಬ್ಬರಿಗೆ ಕೊಡುತ್ತಿದ್ದೆವು. ಟ್ರೀಟ್‌ಮೆಂಟ್ ಪ್ಲಾಂಟೇ ಒಬ್ಬರಿಗೆ ಕೊಡುತ್ತಿದ್ದೆವು. ಜಿ.ಎಲ್.ಎಸ್.ಆರ್. ಒಬ್ಬರಿಗೆ ಕೊಡುತ್ತಿದ್ದೆವು. ಇದೆಲ್ಲಾ ಕೋ-ಆರ್ಡಿನೇಟ್ ಮಾಡುವುದು ಕಷ್ಟ ಎಂದು ಒಬ್ಬರಿಗೇ ಕೊಡುವಂಥ ವ್ಯವಸ್ಥೆ ಮಾಡಿ ಪ್ರೀಕ್ವಾಲಿಫೈ ಮಾಡುತ್ತಿದ್ದೇವೆ ಸ್ವಾಮಿ ಈಗ. 8 ಜನ ಇದ್ದರೆ ಮೂರು ನಾಲ್ಕು ಯಾರಿಗೆ ಕೆಪಾಸಿಟಿ ಎಂದು ಪ್ರೀಕ್ವಾಲಿಫೈ ಮಾಡಿ, ಆ ಪ್ರಿಕ್ವಾಲಿಫೈನಲ್ಲಿ ಯಾರಿಗೆ ಅರ್ಹತೆ ಇದೆಯೆಂಬುದನ್ನು ನೋಡಿ ಅವರಿಗೆ ಕೊಡುತ್ತೇವೆ. ಹಿಂದೆ ಆದಂಥ ಪರಿಸ್ಥಿತಿ ಈಗ ಆಗುವುದಿಲ್ಲ ರಾಮದಾಸ್ ಅವರೆ.

ಅಧ್ಯಕ್ಷರು: ಮುಂದಿನ ಪ್ರಶ್ನೆ ಶಿವಾನಂದ ನಾಯಕ್ ಅವರದ್ದು.

ಶ್ರೀ ಎ.ರಾಮದಾಸ್: ಈಗ ಇದನ್ನು ಏನು ಮಾಡುತ್ತೀರಿ. ದಯಮಾಡಿ ಹೇಳಿ, ನಾವು ಕೂರುತ್ತೇವೆ.

ಶ್ರೀ ಬಿ.ಎನ್.ಬಚ್ಚೇಗೌಡ: ಮಾಡಿಕೊಡುತ್ತೇವೆ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ಬರೀ ಮಾತಿನ ಕೆಂಪನಂಜಿ, ಬಾಯಿ ತುಂಬಾ ಅಪರಂಜಿ. ಇದೇ ಈ ಸರ್ಕಾರದ್ದು. ಏನೂ ಇಲ್ಲ. ಏನು ಹೇಳುತ್ತೀರಿ ಇದಕ್ಕೆ?

ಅಧ್ಯಕ್ಷರು: ಶಂಕರಲಿಂಗೇಗೌಡರೇ, ಆಮೇಲೆ ನೀವು ನನ್ನನ್ನು ಕಾಣಬೇಕಾಗಿದೆ. ಬಹಳ ದಿವಸ ಆಯಿತು ನಿಮ್ಮ ಹತ್ತಿರ ಮಾತನಾಡಿ. ಸ್ವಲ್ಪ ಬನ್ನಿ ದಯಮಾಡಿ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ಆಯಿತು.

ಭಟ್ಕಳ ತಾಲ್ಲೂಕಿನಲ್ಲಿರುವ ಅತ್ಯಂತ ಹಿಂದುಳಿದವರನ್ನು ಪರಿಶಿಷ್ಟ ಪಂಗಡಗಳ ಪಟ್ಟಿಗೆ ಸೇರಿಸುವುದು.

37 (165)

ಶ್ರೀ ಶಿವಾನಂದ ನಾಯ್ಕ (ಭಟ್ಕಳ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಟ್ಕಳ ತಾಲ್ಲೂಕಿನಲ್ಲಿ ವಾಸಿಸುತ್ತಿರುವ ಅತ್ಯಂತ ಹಿಂದುಳಿದ ಬಕಡೆ, ಜೋಗಿ, ಕುಮ್ರಿ, ಮರಾಠಿ, ದೇವಾಡಿಗ, ಹರಿಕಾಂತ ಇವರ ಜೀವನ ಶೈಲಿ ಸಂಪ್ರದಾಯ ಮುಂತಾದವುಗಳ ಬಗ್ಗೆ ಸರ್ಕಾರಕ್ಕೆ ಮಾಹಿತಿ ಇದೆಯೆ?

ಆ) ಇದ್ದಲ್ಲಿ, ಅವರನ್ನು ಪರಿಶಿಷ್ಟ ಜನಾಂಗ ಇಲ್ಲವೆ ಪರಿಶಿಷ್ಟ ಜಾತಿಗೆ ಸೇರಿಸಲು

ಸರ್ಕಾರದವರು ಪರಿಶೀಲಿಸುವುದೇ?

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ (ಸಮಾಜ ಕಲ್ಯಾಣ ಸಚಿವರು):

ಅ) ಇದೆ.

ಆ) ಬಕಡ ಜಾತಿಯು ಪರಿಶಿಷ್ಟ, ಜಾತಿಯ ಪಟ್ಟಿಯಲ್ಲಿ ಇರುತ್ತದೆ. ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದಂತೆ ಮರಾಠಿ ಜಾತಿಯನ್ನು ಪರಿಶಿಷ್ಟ ವರ್ಗದಲ್ಲಿ ಸೇರಿಸಲಾಗಿದೆ. ಜೋಗಿ ಮತ್ತು ಹರಿಕಾಂತ್ರ ಜಾತಿಗಳನ್ನು ಇತರೆ ಹಿಂದುಳಿದ ವರ್ಗಗಳ ಪ್ರವರ್ಗ-1ರಲ್ಲಿ ಸೇರಿಸಲಾಗಿದೆ. ದೇವಾಡಿಗ ಜಾತಿಯನ್ನು ಪ್ರವರ್ಗ-2(ಎ)ನಲ್ಲಿ ಸೇರಿಸಲಾಗಿದೆ. ಮರಾಠಿ ಮತ್ತು ಕುಮ್ರಿ ಜಾತಿಗಳು ಇತರೆ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸೇರಿರುವುದಿಲ್ಲ. ಜೋಗಿ ಜನಾಂಗವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಶ್ರೀ ಡಿ.ಕೆ.ನಾಯ್ಕರ್ ಅವರ ಅಧ್ಯಕ್ಷತೆಯಲ್ಲಿದ್ದ ಸಮಿತಿಯು ಶಿಫಾರಸ್ಸು ಮಾಡಿದ್ದು ಅದನ್ನು ಮುಖ್ಯ ಸಮಿತಿಯ ಪರಿಶೀಲನೆಗೆ ಇಡಲಾಗಿದೆ. ಕುಮ್ರಿ ಮತ್ತು ಮೇಲಿನ ಇತರೆ ಜಾತಿಗಳನ್ನು ಪರಿಶಿಷ್ಟ ವರ್ಗಕ್ಕೆ ಸೇರಿಸಬೇಕೆಂಬ ಕೋರಿಕೆಯನ್ನು ಆದೇಶ ಸಂ: ಸಕಇ 245 ಎಸ್‌ಎಡಿ 85 (ಭಾಗ) ದಿನಾಂಕ: 19-5-97ರಲ್ಲಿ ಪುನರ್ ರಚಿತವಾಗಿರುವ ಸಮಿತಿಯ ಪರಿಶೀಲನೆಗೆ ತರಲಾಗುವುದು.

ಶ್ರೀ ಶಿವಾನಂದ ನಾಯ್ಕ: ಸನ್ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಏನೋ ಕೊಟ್ಟಿದ್ದಾರೆ. ಆದರೆ ತಪ್ಪು ಉತ್ತರ ಕೊಟ್ಟಿದ್ದಾರೆ. ನಾನು ಕುಮ್ರಿ ಮರಾಠಿ ಜನಾಂಗದ ಬಗ್ಗೆ ಕೇಳಿದ್ದೆ. ಮರಾಠಿ ಜನಾಂಗವನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪರಿಶಿಷ್ಟಜಾತಿಗೆ ಸೇರಿಸಿದ್ದಾರೆ ಎಂದು ಕೊಟ್ಟಿದ್ದಾರೆ. ಭಟ್ಕಳ ಕ್ಷೇತ್ರದಲ್ಲಿ ಕುಮ್ರಿ ಮರಾಠಿ ಜನಾಂಗ ಹೆಚ್ಚಿನ ಸಂಖ್ಯೆಯಲ್ಲಿ ಇದೆ. ಮೂಲತಃ ಮಹಾರಾಷ್ಟ್ರದವರಾಗಿರುವಂಥ ಈ ಜನಾಂಗ ಶೈಕ್ಷಣಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಹಿಂದುಳಿದ ಜನಾಂಗ ಎಂದು ಹೇಳುತ್ತಾರೆ. ಉತ್ತರ ಕರ್ನಾಟಕದಲ್ಲಿ ಕುಮ್ರಿ ಮರಾಠಿ ಎಂದು ಹೇಳುತ್ತಾರೆ. ಆ ಜನಾಂಗವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕು. ಮತ್ತು ಬಕಾಡಿ ಜನಾಂಗವನ್ನು ಪರಿಶಿಷ್ಟ ಪಂಗಡಕ್ಕೆ ಈಗಾಗಲೇ ಸೇರಿಸಿದ್ದೇವೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಅವರಿಗೆ ಯಾವುದೇ ಒಂದು ಸೌಲಭ್ಯ ಸಿಗುತ್ತಿಲ್ಲ. ಅಧಿಕಾರಿಗಳಿಗೆ ಅವರು ಯಾವ ವರ್ಗಕ್ಕೆ ಸೇರಿದ್ದಾರೆ ಎಂಬುದು ಗೊತ್ತಿಲ್ಲ ಎಂದು ನನಗನ್ನಿಸುತ್ತದೆ. ಆ ದೃಷ್ಟಿಯಿಂದ ಮತ್ತೊಮ್ಮೆ ಸರ್ಕಾರ ಅದನ್ನು ಸ್ಪಷ್ಟಗೊಳಿಸಬೇಕು. ಮತ್ತು ಆಮೇಲೆ ಪರಿಶೀಲಿಸುತ್ತೇವೆ ಎಂದು ಹೇಳಿದ್ದಾರೆ. ಯಾವಾಗ ಪರಿಶೀಲಿಸುತ್ತಾರೆ ಎಂದು ನಾನು ಕೇಳುತ್ತಿದ್ದೇನೆ.

ಶ್ರೀಮತಿ ಬಿ.ಟಿ.ಲಲಿತಾನಾಯಕ್: ಹೆಳಪರ್ ಜನಾಂಗ ಎಂದು ಕರ್ನಾಟಕದಲ್ಲಿ ಕೆಲವು ಕಡೆ ಇದ್ದಾರೆ. ಅವರನ್ನೂ ಕೂಡ ಎಸ್.ಟಿ.ಗೆ ಸೇರಿಸಬೇಕು ಎಂದು ಮೊದಲಿನಿಂದ ಬೇಡಿಕೆ ಇದೆ. ಆ ಜನಾಂಗದ ಬಗ್ಗೆಯೂ ಹೇಳಬೇಕು.

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ: ಮಾನ್ಯ ಅಧ್ಯಕ್ಷರೆ, ಕೆಲವು ಜಾತಿಗಳು ಚಿನ್ನಪ್ಪರೆಡ್ಡಿ ಆಯೋಗ ಬಂದಾಗ ಅವರಿಗೆ ಸಕಾಲಕ್ಕೆ ಸರಿಯಾದ ರೀತಿ ಮಾಹಿತಿ ಕೊಟ್ಟಿಲ್ಲ. ಶಾಸಕಮಿತ್ರರು ಹೇಳುವ ವಿಷಯದಲ್ಲಿ ಯಾವುದೇ ಪಟ್ಟಿಯಲ್ಲಿ ಇವರನ್ನು ಸೇರಿಸಿಲ್ಲ. ಹಿಂದುಳಿದ ವರ್ಗದಲ್ಲೂ ಸೇರಿಲ್ಲ ಮತ್ತು ಪರಿಶಿಷ್ಟ ಜಾತಿ ಮತ್ತು ವರ್ಗದಲ್ಲೂ ಸೇರಿಲ್ಲ. ತಮಗೆ ಗೊತ್ತಿದೆ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಕ್ಕೆ ಸೇರಿಸುವ ಅಧಿಕಾರ ಇರತಕ್ಕದ್ದು ಕೇಂದ್ರಸರ್ಕಾರಕ್ಕೆ. ನಾವು ಕೇವಲ ಶಿಫಾರಸ್ಸು ಮಾತ್ರ ಮಾಡಬಹುದು. ಮೈನ್ ಕಮಿಟಿ ಇರಲಿಲ್ಲ. ಈಗ ಈ ಕಮಿಟಿ ಅಸ್ತಿತ್ವಕ್ಕೆ ಬಂದಿದೆ. ಬಹಳ ಜಾತಿಗಳು ಬೇರೆ ಬೇರೆ ವರ್ಗಕ್ಕೆ ಸೇರಬೇಕು ಎಂಬ ಬೇಡಿಕೆಯನ್ನಿಟ್ಟಿವೆ. ಆ ಕಮಿಟಿ ಮುಂದೆ ಚರ್ಚೆ ಮಾಡಿ ಶಿಫಾರಸ್ಸು ಮಾಡತಕ್ಕ ಒಂದು ವ್ಯವಸ್ಥೆ ಮಾಡುತ್ತೇವೆ.

ಶ್ರೀ ಎಚ್.ಡಿ.ಬಸವರಾಜು: ಮಾನ್ಯ ಮಂತ್ರಿಗಳು ನಾವು ಶಿಫಾರಸ್ಸು ಮಾಡುತ್ತೇವೆ, ಕೇಂದ್ರದವರು ಅದನ್ನು ಮಾನ್ಯತೆ ಮಾಡಬೇಕು ಎಂದು ಹೇಳಿದರು. ಇದು 1976ರಿಂದ ಪೆಂಡಿಂಗ್ ಇದೆ.

ಅಧ್ಯಕ್ಷರು: ಈಗ ಸುಲಭ ಆಯಿತಲ್ಲಾ. ಇವರು ಶಿಫಾರಸ್ಸು ಮಾಡುತ್ತಾರೆ. ಯಡಿಯೂರಪ್ಪನವರನ್ನು ಕೇಂದ್ರಕ್ಕೆ ಕರೆದುಕೊಂಡುಹೋಗಿ ಮಾಡಿಸಿಕೊಂಡು ಬನ್ನಿ.

ಶ್ರೀ ಎಚ್.ಡಿ.ಬಸವರಾಜು: ನಾನು ಹೇಳಿದಂಥ ಉದ್ದೇಶ ಏನೆಂದರೆ ಈ ಸದನದ ಮೂಲಕ ಮತ್ತೊಮ್ಮೆ ಕೇಂದ್ರದಮೇಲೆ ಒತ್ತಾಯ ತರುವಂಥ ಒಂದು ಶಿಫಾರಸ್ಸನ್ನು ಮಾಡಬೇಕು ಎಂದು.

ಅಧ್ಯಕ್ಷರು: ಅವರು ಮಾಡುತ್ತೇವೆಂದು ಹೇಳಿದ್ದಾರೆ. ಅವರು ಆ ಕೆಲಸವನ್ನು ಮಾಡುತ್ತಾರೆ. ಉಳಿದ ಕೆಲಸವನ್ನು ನೀವು ಮಾಡಿ. ಆ ಜನಾಂಗಕ್ಕೆ ಅನುಕೂಲವಾಗಲಿ.

ಶ್ರೀ ಆರಗ ಜ್ಞಾನೇಂದ್ರ: ಅಧ್ಯಕ್ಷರೆ, ಉಳಿದ ಎಲ್ಲಾ ಕೆಲಸವನ್ನು ಇವರು ಫೈಲ್ ಹೊತ್ತಿಕೊಂಡುಹೋಗಿ ಕೇಂದ್ರಸರ್ಕಾರದಿಂದ ಮಾಡಿಸಿಕೊಂಡು ಬಂದರು. ಈ ವರ್ಗಕ್ಕೆ ಸಂಬಂಧಪಟ್ಟ ಕೆಲಸವನ್ನು ಮಾಡಿಲ್ಲವಲ್ಲಾ ಎಂದು ಅವರು ಹೇಳುತ್ತಿದ್ದಾರೆ.

ಮಂಗಳೂರು ಮಹಾನಗರಪಾಲಿಕೆಯ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಶುದ್ಧೀಕರಣ.

38 (99)

ಶ್ರೀ ಕೆ.ಜಯರಾಮಶೆಟ್ಟಿ (ಉಳ್ಳಾಲ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ಜಪ್ಪಿನ ಮೊಗರು ಪ್ರದೇಶಕ್ಕೆ